ಆ. ರಾಜ್ಯದಲ್ಲಿ ಕಳೆದ 5 ವರ್ಷಗಳಿಂದ ಪ್ರಾರಂಭಿಸಲಾಗಿರುವ ಹೊಸ ಪೊಲೀಸ್ ಠಾಣೆಗಳ ಸಂಖ್ಯೆಯೆಷ್ಟು ?

ಆ. ರಾಜ್ಯದ ಗ್ರಾಮೀಣ ಪೊಲೀಸ್ ಠಾಣೆಗಳಲ್ಲಿರುವ ಪೊಲೀಸ್ ಕನಿಷ್ಠ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ. ರಾಜ್ಯದಲ್ಲಿ ಪೊಲೀಸ್ ಠಾಣೆಗಳನ್ನು ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):-

ಆ. ರಾಜ್ಯದಲ್ಲಿ ಕಳೆದ 5ವರ್ಷಗಳಿಂದ ಅಂದರೆ 1989ರಿಂದ 1993ರ ವರೆಗೆ ಒಟ್ಟು 51ಪೊಲೀಸ್ ಠಾಣೆಗಳು ಮಂಜೂರಾಗಿವೆ.

ಆ. ರಾಜ್ಯದ ಗ್ರಾಮೀಣ ಪೊಲೀಸ್ ಠಾಣೆಗಳಿಗೆ ಕನಿಷ್ಠ ಸಿಬ್ಬಂದಿಯು ಒಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ 2ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್‌ಗಳು, 7 ಹೆಡ್‌ಕಾನ್ಸ್ಟೆಬಲ್‌ಗಳು ಹಾಗೂ 21 ಪೊಲೀಸ್ ಪೇದೆಗಳು ಇರಬೇಕು.

ಇ. 1992-93ಕ್ಕೆ 15, 1993-94ಕ್ಕೆ 15, 1994-95ನೇ ಸಾಲಿಗಾಗಿ 10ರಂತೆ ಒಟ್ಟು 40 ಪೊಲೀಸ್ ಠಾಣೆಗಳನ್ನು ತೆರಯಲು ಸರ್ಕಾರ ಆದೇಶ ಹೊರಡಿಸಿದೆ.

ಮಂಗಳೂರಿನಿಂದ ತಮಿಳುನಾಡಿನ ವೇಲಾಂಗಣಿಗೆ ಬಸ್ಸು ಸೌಕರ್ಯ.

510 (899): ಶ್ರೀ ವಿಜಯಕುಮಾರ್ ಶೆಟ್ಟಿ (ಸುರತ್‌ಕಲ್)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ಮಂಗಳೂರಿನಿಂದ ತಮಿಳುನಾಡಿನ ವೇಲಾಂಗಣಿಗೆ ಸಹಸ್ರಾರು ಭಕ್ತಾದಿಗಳು ಪ್ರಯಾಣ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ:

ಆ. ಮಂಗಳೂರು-ವೇಲಾಂಗನಿ ಮಧ್ಯೆ ನೇರ ಬಸ್ಸು ಸಂಪರ್ಕಕ್ಕೆ ಸರ್ಕಾರ ಕೈಗೊಳ್ಳಲಿರುವ ಕ್ರಮವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಆ. ಹೌದು.

ಆ. ಈ ಮಾರ್ಗವನ್ನು ಕರ್ನಾಟಕ ಮತ್ತು ತಮಿಳುನಾಡು ನಡುವಣ ಅಂತರರಾಜ್ಯ ಸಾರಿಗೆ ಒಪ್ಪಂದದಲ್ಲಿ ಸೇರಿಸಲು ಉದ್ದೇಶಿಸಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಬಗ್ಗೆ.

511(820): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ಕ.ರಾ.ಪ್ರ.ಅ.ನಿ. ಹೋಟೆಲುಗಳ ಒಟ್ಟು ಸಂಚಿತ ನಷ್ಟವೆಷ್ಟು ?

ಆ. ಅದು ಲಾಭವನ್ನು ಗಳಿಸಿದೆಯೆ ? ಹಾಗಿದ್ದಲ್ಲಿ ಎಂದು ?

ಇ. ನಷ್ಟಕ್ಕೆ ಕಾರಣಗಳೇನು ?

ಈ. ಈ ಹೋಟೆಲುಗಳಲ್ಲಿ ಅಲ್ಪ ಪ್ರಮಾಣದಲ್ಲಿ ವಾಸ್ತವ್ಯ ನಿಜವೇ ?

ಉ. ಈ ಹೋಟೆಲುಗಳಲ್ಲಿನ ದರಗಳು ದುಬಾರಿ ಎಂಬುದು ಸರ್ಕಾರಕ್ಕೆ ತಿಳಿದಿದೆಯೇ ?

ಊ. ಈ ಹೋಟೆಲುಗಳನ್ನು ಖಾಸಗಿಯವರಿಗೆ ಮಾರುವ ಪ್ರಸ್ತಾವನೆ ಏನಾದರೂ ಇದೆಯೆ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–

ಅ. ಲೆಕ್ಕ ತನಿಖೆಯ ಪರಿಪತ್ರಗಳನ್ನು ನಿರೀಕ್ಷಿಸಲಾಗುತ್ತಿದೆ.

ಆ. ಹೌದು. 1986–87ನೇ ವಾರ್ಷಿಕ ವರ್ಷದಿಂದ ಲಾಭದಲ್ಲಿದೆ. (ತಾತ್ಕಾಲಿಕ ಲೆಕ್ಕದ ಪ್ರಕಾರ)

ಇ. ಉದ್ಭವಿಸುವುದಿಲ್ಲ.

ಈ. ಹೌದು, (ಕೆಲವು ಹೋಟೆಲುಗಳಲ್ಲಿ)

ಉ. ಇಲ್ಲಾ.

ಊ. ಇಲ್ಲಾ.

ತಿರುಮಲ ಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಹೋಟೆಲ್.

512 (819): ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ)

ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ತಿರುಮಲ ಬೆಟ್ಟದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಹೋಟೆಲ್ ಇದೆಯೆ ?

ಬಿ. ಹಾಗಾದರೆ ಒಟ್ಟು ಎಷ್ಟು ಕೊಠಡಿಗಳಿವೆ ?

ಸಿ. ಪ್ರತಿ ಕೊಠಡಿಗೆ ನಿಗದಿಪಡಿಸಿದ ಬಾಡಿಗೆ ದರ (ಒಂದು ಮತ್ತು ಎರಡು ಹಾಸಿಗೆಗೆ ಹಾಗೂ ಇತರೆ ವಿವರಗಳೊಂದಿಗೆ):

ಡಿ. ಇಲ್ಲಿನ ಕೊಠಡಿಗಳನ್ನು ಕಾದಿರಿಸಲು ಬೆಂಗಳೂರಿನಲ್ಲಿ ವ್ಯವಸ್ಥೆ ಇದೆಯೇ ?

ಇ. ಜನವರಿ 1992ರಿಂದ ಡಿಸೆಂಬರ್ 1992ರವರೆಗೆ ಒಟ್ಟು ಗಳಿಸಿದ ಆದಾಯ ?

ಎಫ್. ಇದೇ ಸಮಯದಲ್ಲಿ ಆದ ಒಟ್ಟು ಖರ್ಚು ?

ಜಿ. ಈ ಘಟಕವು ಲಾಭಗಳಿಸುತ್ತಿದೆಯೇ ಅಥವಾ ನಷ್ಟಹೊಂದುತ್ತಿದೆಯೇ ?

ಹೆಚ್. ಕರ್ನಾಟಕದ ಜನತೆಗೆ ಈ ಹೋಟೆಲ್‌ನಲ್ಲಿ ಆದ್ಯತೆ ಕೊಡುತ್ತಿಲ್ಲ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದು ಕೊರತೆಗಳ ರಾಜ್ಯ ಸಚಿವರು):–